**ಓ.ಎಸ್. 15/2021, ಪಿ.ಡಬ್ಲೂ-1 ಹೆಸರುಃ ಗೀತಾ**

**ದಿಃ21-01-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು 4 ಮತ್ತು 5 ನೇ ಪ್ರತಿವಾದಿಯರ ಪರ : ಶ್ರೀ ಆರ್.ಎಂ.ಓ. ವಕೀಲರಿಂದ**

ನಾನು ಮತ್ತು 1 ರಿಂದ 6 ನೇ ಪ್ರತಿವಾದಿಯರು ಸಿದ್ದರಾಮಪ್ಪ ಬಿನ್ ಮುದ್ದಪ್ಪ ರವರ ವಾರಸುದಾರರು ಎಂದರೆ ಸರಿ. ದಾವಾ ಅನುಸೂಚಿತ ಎಲ್ಲಾ ಸ್ವತ್ತುಗಳು ಸಹ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆಯ ಜೀವಿತ ಅವಧಿಯಲ್ಲಿ ಅಥವಾ ಆ ನಂತರ ನಮ್ಮ ಕುಟುಂಬದ ಸ್ವತ್ತುಗಳ ಕುರಿತಾಗಿ ಯಾವುದೇ ವಿಭಾಗ ಏರ್ಪಟ್ಟಿಲ್ಲ ಎಂದರೆ ಸರಿ. ದಿನಾಂಕ 16.01.2006 ರ ನೊಂದಣಿ ವಿಭಾಗದ ಕುರಿತಾಗಿ ನನಗೆ ಮತ್ತು 4 ಹಾಗೂ 5 ನೇ ಪ್ರತಿವಾದಿಯರಿಗೆ ಯಾವುದೇ ಮಾಹಿತಿ ಇಲ್ಲ ಹಾಗೂ ನಮ್ಮಗಳಿಗೆ ಆ ವಿಚಾರ ಗೊತ್ತಿಲ್ಲ ಎಂದರೆ ಸರಿ. ದಿನಾಂಕ 05.05.2012 ಮತ್ತು 09.01.2013 ರ ನೋಂದಣಿ ದಾನ ಪತ್ರಗಳ ಕುರಿತು ನಮಗೆ ಮಾಹಿತಿ ಇಲ್ಲ ಹಾಗೂ ಆ ಬಗ್ಗೆ ನಮ್ಮ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ದಿನಾಂಕ 13.03.2015 ರಂದು 7 ನೇ ಪ್ರತಿವಾದಿಯ ಹೆಸರಿಗೆ ಜಾರಿ ಮಾಡಿಕೊಟ್ಟಿರುವ ನೊಂದಣಿ ಕ್ರಯಪತ್ರದ ಕುರಿತು ನಮಗೆ ಮಾಹಿತಿ ಇಲ್ಲ ಮತ್ತು ಆ ಬಗ್ಗೆ ನಮ್ಮ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿ. ಈ ಮೇಲ್ಕಂಡ ದಾಖಲಾತಿಗಳು ಹಾಗೂ ಹಸ್ತಾಂತರಗಳು ನನಗೆ

ಮತ್ತು 4 ಹಾಗೂ 5 ನೇ ಪ್ರತಿವಾದಿಯರಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿ. ದಿನಾಂಕ 16.01.2006 ರ ನೋಂದಣಿ ವಿಭಾಗ ಪತ್ರ ಮತ್ತು ದಿ.05.05.2012 ಹಾಗೂ ದಿ.09.01.2013 ರ ನೋಂದಣಿ ದಾನಪತ್ರಗಳ ಕುರಿತು ನನಗೆ ಮಾಹಿತಿ ಇಲ್ಲದ ಕಾರಣ ಸದರಿ ದಾಖಲಾತಿಗಳು ನನಗೆ ಬಂಧನಕಾರಿ ಆಗುವುದಿಲ್ಲ ಎಂದು ಪರಿಹಾರ ಕೋರಿಲ್ಲ ಎಂದರೆ ಸರಿ.

2. ದಾವಾ ಅನುಸೂಚಿತ ಎಲ್ಲಾ ಸ್ವತ್ತುಗಳಲ್ಲಿ ನನಗೆ ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೆ ತಲಾ 1/7 ನೇ ಹಿಸ್ಸೆ ಇದೆ ಎಂದರೆ ಸರಿ. ನಾನು 1 ರಿಂದ 3 ನೇ ಪ್ರತಿವಾದಿಯರ ಬಳಿ ದಾವಾ ಅನುಸೂಚಿತ ಸ್ವತ್ತುಗಳಲ್ಲಿ ನನ್ನ ಪಾಲಿನ ಹಿಸ್ಸೆಯನ್ನು ನೀಡುವಂತೆ ಕೇಳಿದ್ದು, 1 ರಿಂದ 3 ನೇ ಪ್ರತಿವಾದಿಯರು ನಿರಾಕರಿಸಿದ್ದ ಕಾರಣ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು 2 ಮತ್ತು 6 ನೇ ಪ್ರತಿವಾದಿಯರ ಪರ:ಶ್ರೀ ಕೆ.ಎಸ್.ಎನ್. ವಕೀಲರಿಂದ**

2 ನೇ ಪ್ರತಿವಾದಿ ಹಾಜರಿದ್ದು, 2 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರು ಕಾಲವಕಾಶವನ್ನು ಕೋರಿದ್ದು, ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು 8 ಮತ್ತು 9 ನೇ ಪ್ರತಿವಾದಿಯರ ಪರ : ಶ್ರೀ ಜಿ.ಎಂ. ವಕೀಲರಿಂದ**

8 ಮತ್ತು 9 ನೇ ಪ್ರತಿವಾದಿಯರು ಗೈರು ಹಾಜರಿದ್ದು, 8 ಮತ್ತು 9 ನೇ ಪ್ರತಿವಾದಿಯರ ಪರ ವಕೀಲರು ಕಾಲವಕಾಶವನ್ನು ಕೋರಿದ್ದು, ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು 7 ನೇ ಪ್ರತಿವಾದಿಯರ ಪರ : ಶ್ರೀ ಜಿ.ಎಸ್.ಎನ್. ವಕೀಲರಿಂದ**

7 ನೇ ಪ್ರತಿವಾದಿ ಮತ್ತು 7 ನೇ ಪ್ರತಿವಾದಿಯ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ